ಸಿಹಿತಿಂಡಿಗಳನ್ನು ತಯಾರಿಸಿ. ಬಂಧುಗಳಿಗೆಲ್ಲ ಹೇಳಿ ಬನ್ನಿ 'ನಾಳೆ ಇಂಗ್ಲೆಂಡಿನಿಂದ ಮಕ್ಕಳು ಬರುತ್ತಾರೆ. ಈ ದೀಪಾವಳಿಗೆ ನೀವೆಲ್ಲ ನಮ್ಮಲ್ಲಿಗೇ ಬನ್ನಿ.'

ಹಿಗ್ಗು ಸರ್ವವ್ಯಾಪಿ ರುಕ್ಕಮ್ಮ ಚನ್ನಪ್ಪರ ಮುದಿ ಕೈಕಾಲುಗಳಲ್ಲೂ ಅಗಾಧ ಬಲ ತುಂಬುವ ಶಕ್ತಿಯಿದೆ ಹಿಗ್ಗಿಗೆ. 'ಭವಾನಿ ನಿಲಯ' ಹೊಸರೂಪವನ್ನೇ ತಳೆಯುತ್ತದೆ. ಏನೇನು ಕೆಲಸ ಮುಗಿಯಿತು? ಇನ್ನೂ ಏನೇನಾಗಬೇಕು? ಅಯ್ಯೋ, ಸಮಯವೇ ಸಾಕಾಗ್ತಾ ಇಲ್ಲ. ದಮಯಂತಿಯಮ್ಮನ ದಣಿದ ಕಣ್ಣುಗಳಲ್ಲಿ ಅಲ್ಪ ಸಮಯಕ್ಕಾಗಿ ಬಂದು ತಂಗಿತು ಸ್ವಲ್ಪ ನಿದ್ರೆ ಹೊರಗೆಲ್ಲ ಬಹಳಷ್ಟು ಸದ್ದುಗಳು. ಎಲ್ಲೆಲ್ಲೂ ಜನ ಗಡಿಬಿಡಿಯಲ್ಲಿದ್ದಾರೆ. ಹೌದಲ್ಲ ನಾಳೆಯೇ ದೀಪಾವಳಿ, ಸಂಭ್ರಮದ ಹಬ್ಬಕ್ಕೆ ನಾವೂ ಅಣಿಯಾಗಬೇಡವೇ?

ಮುಂಬಾಗಿಲಿಗೆ ಚೆಂಡುಸೇವಂತಿಗೆ ಮಾವಿನೆಲೆಗಳ ತೋರಣ ಕಟ್ಟಿದ ಚನ್ನಪ್ಪ, 'ಅರೆರೇ ಇದೇನಿದು? ತೋರಣ ಸಡಿಲವಾಗಿ ಬಿದ್ದುಬಿಟ್ಟಿತೆ?'

ಮತ್ತೆ ನೋಡಿದರೆ 'ಅವರು' ಸಡಿಲವಾಗಿರುವ ತೋರಣವನ್ನು ಎತ್ತಿಕಟ್ಟುತ್ತಿದ್ದಾರೆ.

'ಯಾವಾಗ ಬಂದಿರಿ?' ಅಮ್ಮ ಕೇಳಿದರು.

'ನೀನು ಇಷ್ಟೆಲ್ಲ ಸಂಭ್ರಮ ನಡೆಸಿರುವಾಗ ನಾನು ಸುಮ್ಮನೆ ಕೂರುತ್ತೇನೆಯೆ?' ಅವರು ನಕ್ಕರು.

'ಒಳ್ಳೆಯದಾಯಿತು ನನಗಂತೂ ಏನೂ ತೋಚುತ್ತಿಲ್ಲ. ಮಗು ಬರ್ತಾ ಇದ್ದಾನೆ. ಅವನಿಗೆ ಏನು ಬೇಕೋ ಏನೇನು ಇಷ್ಟವಾದೀತೋ ನಿಮಗೆ ಚೆನ್ನಾಗಿ ಗೊತ್ತು.'

'ಅಮ್ಮ ಕರೆದಿರಾ?' ಚನ್ನಪ್ಪ ಓಡಿ ಬಂದ. ಅಮ್ಮನ ಸ್ವರ ಕೇಳಿಸಿತು.

'ಇಲ್ಲವಲ್ಲ ಅಂದ ಹಾಗೆ ನೀನು ತೋರಣ ಸರಿಯಾಗಿ ಕಟ್ಟಬಾರದೆ? ನೋಡಿಲ್ಲಿ ಅವರೇ ಕಟ್ಟಬೇಕಾಯಿತು'.

'ಯಾರಮ್ಮ? ನಾನು ಗಟ್ಟಿಯಾಗೇ ಕಟ್ಟಿದ್ದೆನಲ್ಲ. ಯಾರು ಬಂದು ಕಟ್ಟಿದರು ಮತ್ತೆ?'

'ಅವರು... ನಿನ್ನ ಧಣಿ ಗೊತ್ತಾಗುವುದಿಲ್ಲವಾ?' ಅಮ್ಮನನ್ನು ವಿಚಿತ್ರವಾಗಿ ನೋಡಿದ ಚನ್ನಪ್ಪ ತಲೆ ತುರಿಸಿಕೊಂಡ.

'ಇರಲಿ ನೀನು ಹೋಗು'

'ಇತ್ತೀಚೆಗೆ ಹೀಗೆ ಆಗುತ್ತಿದೆ. ಇವರೇ ನಿಂತು ಮಾಡಿದ ಕೆಲಸವನ್ನು ಹೇಳಿದ್ದೂ ತಪ್ಪಾಗುತ್ತಿದೆ.'

'ಎಲ್ಲಿದ್ದೀರಿ?' ದಮಯಂತಿಯ ನೋಟ ಹೊರಳಿತು, ಆದರೆ ಬಾಗಿಲು ಬರಿದಾಗಿದೆ. ತೋರಣ ತನ್ನ ಜಾಗೆಯನ್ನಂಟಿ ಕೂತಿದೆ.

ಹೋಗಿಬಿಟ್ಟರೆ?

***

ಎಷ್ಟು ಬೇಗ ರಾತ್ರಿ ಮುಗಿದು ಬೆಳಕು ಹರಿಯಿತು? ಅಬ್ಬಾ ಎಂಥ ಸಂತಸವನ್ನು ತಂದಿಳಿಸಲಿರುವ ಸಂಜೆ! ಇದೇ ಪ್ರತೀಕ್ಷೆ ಅಮ್ಮನಿಗೆ ಹೊಸ ಹುರುಪು, ತಂದಿದೆ. ಹೊಸ ಉತ್ಸಾಹ, ತಂದಿದೆ. ಸಂಜೆಯಾಗಲು ಇನ್ನೂ ಎಷ್ಟು ಸಮಯವಿದೆ? ಹೊರಳಿ ನೋಡಿದರು. ಏಳು ಗಂಟೆಯಾಗಿದೆ!

ಏಳಲು ನೋಡಿದರೆ ನಿಲುವುಗನ್ನಡಿಯ ಗಾಜನ್ನು ಅವರು ಬಟ್ಟೆಯಿಂದ ಒರೆಸುತ್ತಿದ್ದಾರೆ. 'ನಿದ್ರೆ ಚೆನ್ನಾಗಿ ಬಂದಿತೆ?' ಅಮ್ಮನತ್ತ ನೋಡಿ ನಕ್ಕರು. 'ನಿನ್ನ ಸಂತೋಷ ಕಂಡು ಕೇಳಿದೆನಷ್ಟೆ.'

'ನಿಮಗಿಲ್ಲವೆ?'

ತಮ್ಮ ಸಂಭಾಷಣೆಯೇ ಹೀಗೆ, ಚುಟುಕಾದರೂ ಲವಲವಿಕೆಯ ಮಾತುಗಳು. 'ಮಿಕ್ಕೀ... ಮಿಕ್ಕಿ... ಬಾ... ಬಾ ಇಲ್ಲಿ' ಒಳಗೋಡಿ ಬಂದ ಬಿಳಿ ಹತ್ತಿಯುಂಡೆ ಪುಟ್ಟ ನಾಯಿ ಅವರಿಗದರ ಮೇಲೆ ಅಸೀಮ ಪ್ರೀತಿ. ಕನ್ನಡಿಯನ್ನು ನೋಡಿ ರಭಸವಾಗಿ ಬಾಲ ಆಡಿಸುತ್ತ ಕುಯಿಗುಟ್ಟಿತು... ಗುರುಗುಟ್ಟಿತು... ಎತ್ತಿಕೊ ಮುದ್ದಿಸು ಎಂದು ತನ್ನದೇ ಭಾಷೆಯಲ್ಲಿ ಲಲ್ಲೆಗರೆಯಿತು. ಅದರ ತಲೆ ನೇವರಿಸಿ ಬೆನ್ನು ತಟ್ಟಿದಾಗಲೇ ಕೆಳಗಿಳಿದೀತು.

'ಹೋಗು ಮಿಕ್ಕಿ, ಇನ್ನು ಸಾಕು...' ಅವರು ಇತ್ತ ಹೊರಳಿದರು.

'ಎಲ್ಲ ತಯಾರಿ ಆಯಿತೆ?' ಗಾಜನ್ನೊರೆಸಿ ಬಟ್ಟೆ ಮಡಿಸಿ ಅಮ್ಮನ ಪಕ್ಕ ಕೂತರು. 'ಅಲ್ಲ ಮೊಮ್ಮಗನಿಗೆ ಏನು ಉಡುಗೊರೆ ಎಂದು ಚಿಂತೆ ಆಗಿತ್ತು. ನಿಮ್ಮನ್ನು ಕೇಳಬೇಕೆಂದೇ ಕಾಯುತ್ತಿದ್ದೆ.'

ರುಕ್ಕಮ್ಮ ಒಳಬಂದಳು 'ಏನು ಕೇಳಬೇಕಿತ್ತು ಅಮ್ಮ?'

'ನಿನ್ನನ್ನಲ್ಲ... ಇವರನ್ನು... ನಿನಗೇನು ಗೊತ್ತಾಗುತ್ತದೆ?' ರುಕ್ಕಮ್ಮನ ಮುಖದಲ್ಲಿ ಗಲಿಬಿಲಿ.

'ಯಾರವರು? ಯಾರನ್ನಮ್ಮಾ?'

'ಹುಚ್ಚೀ ಇಲ್ಲಿ ಕೂತಿದ್ದಾರೆ ನೋಡು ನಿನ್ನ ಧಣಿಯ ಗುರುತು ಹಿಡಿಯಲಿಕ್ಕೆ ಆಗ್ತಾ ಇಲ್ಲಾ ನಿನಗೆ?'

ರುಕ್ಕಮ್ಮ ತಬ್ಬಿಬ್ಬಾಗಿದ್ದಳು.

ಹಾಸಿಗೆಯಿಂದೇಳುವಾಗಲೆ ಏನು ಮರೆವಾಗಿದೆ ಅಮ್ಮನಿಗೆ? ಪಕ್ಕದಲ್ಲಿ ಯಾರೋ ಕೂತಂತೆ ಮಾತನಾಡುತ್ತಾರಲ್ಲ. ಅಮ್ಮ ಒಬ್ಬರೇ ಇರುವುದು ಯಾವ ಹುಚ್ಚನಿಗೂ ತಿಳಿದೀತು ಆದರೆ...

'ಇರಲಿ ನೀನು ಹೋಗು. ನಿಮಗೆಲ್ಲ ಹೇಳಿ ಪ್ರಯೋಜನವಿಲ್ಲ...' ಮುನಿಸಿನ ಸ್ವರ ಒಡತಿಯದು. ಹೊರಳಿ ನೋಡುತ ಪಡಸಾಲೆಗೆ ನಡೆದು ಗಂಧದ ಹಾರ ತೊಡಿಸಿ ಕುಂಕುಮವಿಟ್ಟಿದ್ದ ಧಣಿಯ ಭಾವಚಿತ್ರವನ್ನು ಬಟ್ಟೆಯಿಂದ ಒರೆಸಿ ಒಳಹೋದಳು. ಒಡತಿಯ ಬಗ್ಗೆ ಮನದ ತುಂಬ ಮರುಕ. 'ಪಾಪ ವಯಸ್ಸಾಯಿತು...' ಹಾಗೆ ಅವರ ಸ್ವಭಾವ ಒಳ್ಳೆಯದೇ. ತಮ್ಮನ್ನೆಲ್ಲ ಅಕ್ಕರೆಯಿಂದ ನೋಡಿಕೊಂಡವರು. ಚನ್ನಪ್ಪನೂ ಅದೇ ಹೇಳುತ್ತಾನೆ. 'ಇಂಥ ಧಣಿ ಇಂಥ ಒಡತಿ ಪುಣ್ಯ ಮಾಡಿದವರಿಗಷ್ಟೇ ದೊರೆಯುತ್ತಾರೆ' ಎಂದು. ಆದರೆ ದುಃಖ ಮಾಡುವ ಹಾನಿಯನ್ನು ಅಳೆಯುವುದಸಾಧ್ಯ.

'ಮೊಮ್ಮಗನಿಗೆ ಏನು ಕೊಡುವುದೆಂದು ಹೇಳಲೇ ಇಲ್ಲವಲ್ಲ ಇವರು?' ಚಿಂತೆಯಲ್ಲೇ ಅಮ್ಮನ ಸ್ನಾನ. ಮುಗಿಯಿತು, ಸಂಜೆಗಾಗಿ ಮೂರು ಸಿಹಿ, ನಾಳೆಗಾಗಿ ಐದು ಸಿಹಿಯ ಅಡುಗೆ ಬೇಕು. ರುಕ್ಕಮ್ಮನ ಕೈ ರುಚಿ ಒಮ್ಮೆ ತಿಂದವರು ಮರೆಯಲಾರರು, ಆದರೂ ಈ ಬಾರಿ ರಾಜೀವನಿಗೆ ಇಷ್ಟವಾದದ್ದನ್ನೇ ಮಾಡಿಸಬೇಕು. ಸಂಜೆಗಾಗಿ ಜೀವ ಕಾತರಿಸಿ ಕಾದಿತು. ಮಧ್ಯಾಹ್ನ ಮುಗಿಯ ತೊಡಗಿದೆಯಷ್ಟೆ.

ಮಲಗುವ ಕೋಣೆಯಲ್ಲಿ ಒಳಗೊಂದು ಕೋಣೆಯಿದೆ. ಎಲ್ಲರಿಗೂ ಅಲ್ಲಿ ಪ್ರವೇಶವಿಲ್ಲ. ಭವಾನಿ ನಿಲಯದ ಹನ್ನೊಂದು ಕೋಣೆಗಳಲ್ಲಿ ಎಲ್ಲವನ್ನೂ ಬಳಸುವುದೇ ಸಾಧ್ಯವಿಲ್ಲ. ಕೆಲವನ್ನು ಹಾಗೆಯೇ ಮುಚ್ಚಿಟ್ಟು ಬಿಡಲಾಗಿದೆ. ರಾಜೀವ, ಶ್ರಾವಣಿ, ಮಗು ಇಲ್ಲಿದ್ದರೆ ಅವು ಬೇಕಾಗಬಹುದಿತ್ತು. ಪರದೇಶಕ್ಕೆ ಹಾರಿಹೋದವರಿಗೆ ಇಲ್ಲಿನ ಮಣ್ಣಿನ ವಾಸನೆ ಮರೆತು ಹೋಗಿಬಿಡುತ್ತದೆ. ಅಪರಿಚಿತವಾಗಿದ್ದ ಲೋಕ ತಮ್ಮದಾಗಿ 'ಜನನೀ ಜನ್ಮ ಭೂಮಿಶ್ಚ...' ದೂರವಾಗಿ ಆಗೀಗ ಬಂದು ಹೋಗುವ ಪಾರಿವಾಳಗಳು.

ಮಲಗುವ ಕೋಣೆಯ ಒಳಗಿನ ಕೋಣೆಯಲ್ಲೇ ತಿಜೋರಿಯಿದೆ. ಅಲ್ಲಿಂದ ಲಕ್ಷ್ಮೀ ಪೂಜೆಗಾಗಿ, ಸೊಸೆ ಧರಿಸಿಕೊಳ್ಳುವುದಕ್ಕಾಗಿ ಒಡವೆಗಳನ್ನು ಹೊರತೆಗೆಯಬೇಕು. ತಿಜೋರಿ ತೆರೆದು ಅಮ್ಮ ಕೈ ಇಡುವಾಗ ಅವರೂ ಬಂದು ಕೂತು ಪೂರ್ಣ ಅಡಿಯಲ್ಲಿದ್ದ ಅರೆಯೊಂದನ್ನು ಎಳೆದರು.

'ಅರೆ! ಇಲ್ಲೊಂದು ಬೇರೆ ಖಾನೆ ಇದೆಯೆ? ನನಗೆ ತಿಳಿದೇ ಇರಲಿಲ್ಲ' ಎಂದರು. 'ಈಗ ತೋರಿಸುತ್ತಿದ್ದೀನಲ್ಲ. ಅಷ್ಟಕ್ಕೂ ನಾನೆಲ್ಲಿ ಹೋಗಿದ್ದೇನೆ? ನಿನ್ನ ಜೊತೆಯೇ ಇರುತ್ತೇನೆ ಎಂದು ಭಾಷೆ ಕೊಟ್ಟಿದ್ದೇನಲ್ಲವೆ...' ಅವರು ಹೇಳಿದರು.

'ಹೌದಲ್ಲ, ಯಾವಾಗ ಹೇಳಿದರೆ ಏನು?' ಅಮ್ಮ ಅಂದುಕೊಂಡರು.

'ನೋಡಿಲ್ಲಿ ಮೊಮ್ಮಗನಿಗೆ ಉಡುಗೊರೆ ಬೇಕು ಅನ್ನುತ್ತಿದೆಯಲ್ಲ, ಹಿಡಿ' ಅವರ ಕೈಯಲ್ಲಿ ಎರಡು ವಸ್ತುಗಳು, ಒಂದು ಪುಟ್ಟ ಮೋಟಾರು ಕಾರು, ಇನ್ನೊಂದು ಚಕ್ಕಡಿಬಂಡಿ, ಎರಡೂ ಬೆಳ್ಳಿಯವು! ಮಿರಮಿರನೆ ಮಿಂಚುತ್ತ ಎಷ್ಟು ಸುಂದರವಾಗಿವೆ? ಮನಸ್ಸು ಹಿಗ್ಗಿತು. 'ಬಹಳ ಚಂದವಾಗಿವೆ...' ಎಂದು ಮೆಚ್ಚಿದರು.

'ಈ ಬಂಡಿಗಳನ್ನು ಹಿಡಿದು ನಾನು ಆಡುತ್ತಿದ್ದೆನಂತೆ. ಒಂದು ದಿನ ಎತ್ತಿ ಮುಚ್ಚಿಟ್ಟರೂ ಇವೇ ಬೇಕು ಎಂದು ರಚ್ಚೆ ಹಿಡಿದು ಅಳುತ್ತಿದ್ದೆ ಎಂದು ನನ್ನಮ್ಮ ಹೇಳುತ್ತಿದ್ದಳು'. ಅವರ

